# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 74(42) |
| ಸದಸ್ಯರ ಹೆಸರು: | ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 19.12.2022 |
| ಉತ್ತರಿಸಬೇಕಾದ ಸಚಿವರು: | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | 1988ನೇ ಸಾಲಿನಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆಯನ್ನು ನೀಗಿಸಲು ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ರಾಮನಗರ ಜಿಲ್ಲೆಗಳಲ್ಲಿ ಜಿಲ್ಲಾ ಪರಿಷತ್‌ಗಳ ಮೂಲಕ ಗೌರವಧನ ಆಧಾರದ ಮೇಲೆ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಉತ್ತೀರ್ಣರಾದವರನ್ನು ನೇಮಿಸಲಾಗಿದೆಯೇ(ಮಾಹಿತಿಯನ್ನು ನೀಡುವುದು) | 1988ನೇ ಸಾಲಿನಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿರುವ ಶಿಕ್ಷಕರ ಕೊರತೆಯನ್ನು ನಿವಾರಿಸಲು ಆಯಾ ಜಿಲ್ಲಾ ಅಡ್‌ಹಾಕ್ ಸಮಿತಿಯ ನಿರ್ಣಯದಂತೆ ಎಸ್.ಎಸ್.ಎಲ್.ಸಿ / ಪಿ.ಯು.ಸಿ ಉತ್ತೀರ್ಣರಾದವರನ್ನು ಗೌರವ ಶಿಕ್ಷಕರುಗಳನ್ನಾಗಿ ಜಿಲ್ಲಾಪಂಚಾಯತ್ ವತಿಯಿಂದ ನೇಮಕ ಮಾಡಿಕೊಂಡಿರುತ್ತಾರೆ. |
| (ಆ) | ಸದರಿಯವರಿಗೆ ಪ್ರಸ್ತುತ ನೀಡುತ್ತಿರುವ ಮಾಸಿಕ ವೇತನ ಮತ್ತು ಇತರೆ ಭತ್ಯೆಗಳಾವುವು; | ಪ್ರತಿ ಮಾಹೆ ರೂ. 17000-00ಗಳ ಗೌರವಧನ ಸಂಭಾವನೆಯನ್ನು ನೀಡಲಾಗುತ್ತಿದೆ. |
| (ಇ) | 1988ನೇ ಸಾಲಿನಿಂದ ಇಲ್ಲಿಯವರೆಗೂ ಸುಮಾರು 34 ವರ್ಷಗಳಿಂದ ಸತತವಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | 1988ನೇ ಸಾಲಿನಿಂದ ಕರ್ತವ್ಯ ನಿರ್ವಹಿಸುತ್ತಿರುವ ಗೌರವ ಶಿಕ್ಷಕರ ವಿವರ:<br>ಸರ್ಕಾರದ ಆದೇಶ ಸಂಖ್ಯೆ: ಆಇ 241 ವೆಚ್ಚ 6/2020(ಇ) ದಿನಾಂಕ: 29/07/2020ರ ಪ್ರಕಾರ<br><table><tr><td>ಕ್ರ. ಸಂ</td><td>ಜಿಲ್ಲೆಯ ಹೆಸರು</td><td>ಗೌರವ ಶಿಕ್ಷಕರ ಸಂಖ್ಯೆ</td></tr><tr><td>1</td><td>ಬೆಂಗಳೂರು ಗ್ರಾಮಾಂತರ</td><td>25</td></tr><tr><td>2</td><td>ರಾಮನಗರ</td><td>45</td></tr><tr><td>3</td><td>ಬಳ್ಳಾರಿ</td><td>51</td></tr><tr><td></td><td>ಒಟ್ಟು</td><td>121</td></tr></table> |
| (ಈ) | 34 ವರ್ಷಗಳಿಂದ ಸತತವಾಗಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಸರ್ಕಾರ ಸಮಾನವೇತನ ಹಾಗೂ ಕನಿಷ್ಠ ವೇತನದ ಅಡಿಯಲ್ಲಿ ಸಂಬಳ ನಿರ್ಧರಿಸಲಾಗಿದೆಯೇ; ನಿರ್ಧರಿಸಲು ಆಗದಿರುವ ಬಗ್ಗೆ ಕಾರಣಗಳೇನು? | ಜಿಲ್ಲಾ ಪಂಚಾಯತ್ ವತಿಯಿಂದ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳನ್ನು ಗೌರವಧನ ಶಿಕ್ಷಕರುಗಳನ್ನಾಗಿ ನೇಮಕ ಮಾಡಿಕೊಳ್ಳಲಾಗಿದೆ. ಸದರಿಯವರುಗಳು ತರಬೇತಿ ಹೊಂದಿದವರಾಗಿರುವುದಿಲ್ಲ. ಆದ್ದರಿಂದ ಸರ್ಕಾರದ ವತಿಯಿಂದಲೇ ಗರಿಷ್ಠ 45 ದಿನಗಳ ತರಬೇತಿಯನ್ನು ನೀಡಲಾಗಿರುತ್ತದೆ. ಸದರಿ |

| | | |
|---|---|---|
| | (ಸಂಪೂರ್ಣ ಮಾಹಿತಿ ನೀಡುವುದು) | ಗೌರವಧನ ಶಿಕ್ಷಕರುಗಳ ಸೇವೆಯನ್ನು ಸಕ್ರಮಗೊಳಿಸುವ ಅಥವಾ ವೇತನ ಭತ್ಯೆಯನ್ನು ಹೆಚ್ಚಿಸುವ ಸಂಬಂಧ ರಚಿಸಲ್ಪಟ್ಟ ಸಚಿವ ಸಂಪುಟದ ಉಪಸಮಿತಿಯ ನಡವಳಿಯಂತೆ ಸದರಿ 3 ಜಿಲ್ಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಗೌರವಧನ ಶಿಕ್ಷಕರುಗಳನ್ನು ಖಾಯಂಗೊಳಿಸಲು ನಿಯಮಗಳಲ್ಲಿ ಅವಕಾಶವಿಲ್ಲದ ಕಾರಣ ಗೌರವಧನ ಸಂಭಾವನೆಯನ್ನು ಮಾಸಿಕ ರೂ. 17000-00 ಗಳಿಗೆ ಹೆಚ್ಚಿಸಲಾಗಿದೆ.<br><br>ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಪೀಲು ಸಂಖ್ಯೆ: 213/2013ರ ಆದೇಶದಲ್ಲಿ ವಿವಿಧ ಪ್ರಕಾರದ ತಾತ್ಕಾಲಿಕ, ಅರೆಕಾಲಿಕ, ಗುತ್ತಿಗೆ, ಪರಿಣಿತ, ಅರೆಪರಿಣಿತ, ಕೆಳಹಂತದ ನೌಕರರುಗಳನ್ನು ಒಳಗೊಂಡಂತೆ ಎಲ್ಲಾ ನೌಕರರು ಕನಿಷ್ಠ ಮೂಲ ವೇತನಕ್ಕೆ ಅರ್ಹರು ಎಂಬ ಆದೇಶದ ಹಿನ್ನೆಲೆಯಲ್ಲಿ ಸರ್ಕಾರಿ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಆಯಾಗಳಿಗೆ ಕನಿಷ್ಠ ಮೂಲ ವೇತನ ನಿಗಧಿಪಡಿಸಲಾಗಿರುತ್ತದೆ. ಅದರಂತೆಯೇ ರಾಜ್ಯದ 3 ಜಿಲ್ಲೆಗಳಲ್ಲಿನ ಕರ್ತವ್ಯನಿರತ ಗೌರವಧನ ಶಿಕ್ಷಕರುಗಳಿಗೂ ಸಹಾ ರೂ. 17000-00ಗಳ ಗೌರವಧನ (ಕನಿಷ್ಠ ವೇತನ)ವನ್ನು ನಿಗಧಿಪಡಿಸಿ ಪಾವತಿಸಲಾಗುತ್ತಿದೆ. |

ಇಪಿ 399 ಪಿಎಂಸಿ 2022

(ಬಿ.ಸಿ.ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು.